# ಅಭಿವ್ಯಕ್ತಿ



ನಡೆವ ಹೆಜ್ಜೆಗಳ ಉಗುರುಗಳಲ್ಲಿ
ಸಂಚರಿಸುವ ರಕುತದ ದೃಷ್ಟಿಗೊಂದು ದಿಕ್ಕಿದೆ
ಎಡವಿದ ಕಾಲ ಬೆರಳಿನ ಉಗುರು
ಸೂಚನೆ ಕೊಡುತ್ತದೆ ಮತ್ತೆ ಮತ್ತೆ
ಮೆದುಳಿಗೆ ಮರ್ಕಟದ ಬುದ್ಧಿಗೆ!

ಕೊರೆವ ಗೆರೆಗಳು ಕೈಯ ಬೆರಳುಗಳಲ್ಲಿನ
ಏಕಾಗ್ರತೆಗೆ ಜೀವ ಕೊಟ್ಟಿವೆ
ಒಂಟಿಗೆರೆಗಳ ಚಿತ್ರವಾಗುವ ಮುನ್ನ

ಆಳದ ಏಕಾಂತಕ್ಕೆ ಭಂಗ ಬರದಂತೆ
ಅಲೆವ ಅಲೆಗಳು ಒಂದು ತುದಿಯಿಂದ
ಮತ್ತೊಂದು ತುದಿಗೆ ಹೊರಟು
ಅಡೆತಡೆಗಳ ದಾಟಿ ಗುರಿಯ ದಡ
ಸೇರುವುದರಲ್ಲಿಯೇ ಧನ್ಯ

ಆಕಾಶದ ಅಸೀಮ ಅವತಾರವೂ
ಚುಕ್ಕಿ ಗಡಣಗಳ ಸಜ್ಜಿಕೆಗೆ
ಏಡಿ ತನ್ನ ಮರಿಗಳ ಹೊಟ್ಟೆಯಲಿ ಹಿಡಿದಿಟ್ಟಂತೆ ಕಾಪಿಟ್ಟ
ಮೋಡಗಳಿಗೆ ಬೆರಗಾಗಿ ಬಯಲಾಗಲಿಲ್ಲ
ತನ್ನ ತೆರೆದ ಎದೆಗನ್ನಡಿಯಲ್ಲಿ
ಮುಖ ನೋಡಿಕೊಳ್ಳುವ
ನಿರ್ವಿಕಾರತೆಯ ವಿಶಾಲ ಸಾಧ್ಯತೆ
ಪ್ರತಿದಿನದ ಇರುಳು ಹಗಲು

ನಿರ್ಮಲ ನೀರವದಲ್ಲೂ ಅಲೆವ ಅಲೆಗಳು
ಮೆಲ್ಲ ಬೀಸುವ ಗಾಳಿಯೊಂದಿಗೆ ಪಿಸುಮಾತು
ಹೊಳೆ ಹಳ್ಳಗಳ ಜುಳುಜುಳು ನಿನಾದ
ನಿರ್ಲಿಪ್ತ ಭಾವದಲ್ಲಿ ಚಲಿಸುವ
ನದಿಗಳಿಗೆ ಕೇಳಿಸುವುದು ಆ ಅಲೌಕಿಕ ಸಂಗೀತ
ತಂಪೆರೆವ ಮಳೆಗೆ ಭೂಮಿಯೊಡಲಿನ
ಬೀಜಗಳೆದ್ದು ಚಲಿಸಿದಂತೆ
ನಿಂತಲ್ಲಿಯೇ ಹಗೂರ ನಡಿಗೆ ಮಾಡಿದಂತೆ

ಅರಳಿದ ಹೂ ದಳಗಳಲ್ಲಿನ ಸ್ನಿಗ್ಧ
ಹನಿಬಿಂದುವಿನಂತೆ ಹೊಳೆವ ನತ್ತು
ತಿದ್ದಿ ತೀಡಿದ ರಂಗು ಪರಿಮಳವ
ಹೊತ್ತೊಯ್ಯುವ ಗಾಳಿಗೂ
ಆಡಿಸುತ್ತದೆ ಮಾತು
ನಿದ್ದೆಯಲ್ಲಿ ನಗುವ ಮಗು
ದೇವತೆಗಳ ಜೊತೆ ಮಾತನಾಡಿದಂತೆ!

**• ಫಾಲ್ಗುಣ ಗೌಡ ಅಚವೆ**
ಕಲೆ: ಡಿ.ಕೆ. ರಮೇಶ್